ಮಧ್ಯಂತರ ಅರ್ಜಿ **5** ರ ಮೇಲಿನ ಆದೇಶದಂತೆ ದಿನಾಂಕಃ **06.06.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ವಾದಿಯ ಪರ ವಕೀಲರಿಂದಃ

***02. ಕಳೆದ ದಿನಾಂಕದಂದು ಗುರುತಿಸಿಕೊಂಡ ನಿಪಿ1 ರಿಂದ ನಿಪಿ12 ದಾಖಲೆಗಳ ಕ್ರಮ ಸಂಖ್ಯೆಯಲ್ಲಿ ವ್ಯತ್ಯಾಸ ಕಂಡು ಬಂದಿದ್ದರಿಂದ ನಿಪಿ1 ರಿಂದ ನಿಪಿ12 ನ್ನು ನಿಪಿ1 ರಿಂದ ನಿಪಿ11 ಎಂದು ಸರಿಪಡಿಸಲಾಗಿದೆ.***

03. ಮರಣ ಪ್ರಮಾಣ ಪತ್ರವನ್ನು ಎದುರುದಾರರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ**12** ಎಂದು ಮತ್ತು ಎ.ಸಿ.ಯವರ ನ್ಯಾಯಾಲಯದ ಆದೇಶದ ದೃಢೀಕೃತ ಪ್ರತಿಯನ್ನು ನಿಪಿ**13** ಎಂದು ಗುರುತಿಸಿತು. ಫೋಟೋಗಳ ಜೊತೆ ಕಲಂ 65(ಬಿ) ಸಾಕ್ಷ್ಯ ಅಧಿನಿಯಮದ ದೃಢೀಕರಣ ಪತ್ರ ಅಥವಾ ಸಿಡಿ, ನೆಗಟಿವ್ ಇಲ್ಲವೇ ಸ್ಟುಡಿಯೋ ರಸೀದಿ ಹಾಜರು ಮಾಡಿಲ್ಲವೆಂದು ಎದುರುದಾರರ ಪರ ವಕೀಲರು ತಕರಾರು ಮಾಡಿದ್ದರಿಂದ ಅವುಗಳನ್ನು ಹಾಜರುಪಡಿಸಿ ಫೋಟೋಗಳನ್ನು ಗುರುತಿಸಿಕೊಳ್ಳುವಂತೆ ಸೂಚಿಸಿದ್ದು, ಅರ್ಜಿದಾರರ ಪರ ವಕೀಲರು ನಿಪಿ1 ರಿಂದ ನಿಪಿ13 ಕ್ಕೆ ದಾಖಲೆ ಗುರುತಿಸುವುದನ್ನು ಮುಕ್ತಾಯ ಮಾಡಬಹುದೆಂದು ತಿಳಿಸಿದ್ದಾರೆ.

***ಪಾಟೀ ಸವಾಲು : ಎದುರುದಾರರ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.